**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 827 /2018 PW-2**

**ಸಾಕ್ಷಿಯನ್ನು ದಿಃ 14.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಗಲಾಟೆಯಾದ ನಂತರ ನಾನು ಪ್ರಜ್ಞೆ ತಪ್ಪಿರುತ್ತೇನೆ. ನಂತರ ಪ್ರಜ್ಞೆ ಬಂದಾಗ ನಾನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ನನ್ನನ್ನು ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಕಲ್ಲನ್ನು ತೋರಿಸಿ ಇದೇ ಕಲ್ಲಿನಿಂದ ಆರೋಪಿ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ಸರಿ ಎನ್ನುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಎನ್ ಆರ್ ರವರಿಂದ ಃ**

ಆರೋಪಿ ನನ್ನ ಅಳಿಯ ಎಂದರೆ ಸರಿ. 2018 ರಿಂದ ನನ್ನ ಮಗಳು ಮತ್ತು ಆರೋಪಿ ಬೇರೆ ಬೇರೆ ವಾಸವಿದ್ದಾರೆ. ನನ್ನ ಮಗಳ ಆರೋಪಿಯ ವಿರುದ್ಧ ಜೀವನಾಂಶಕ್ಕಾಗಿ ಹಾಸನದ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಮಾನ್ಯ ಕೌಟುಂಬಿಕ ನ್ಯಾಯಾಲಯವು ಮಗುವನ್ನು ದಿಃ 17.03.2018 ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಆದೇಶಿಸಿತ್ತು ಎಂದರೆ ಸರಿ. ಆ ದಿನಾಂಕದಂದು ಮಗು ಆರೋಪಿಯ

ಸುಪರ್ದಿಯಲ್ಲಿ ಇದ್ದುದರಿಂದ ಅದರ ಸಲುವಾಗಿ ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಆ ದಿನಾಂಕದಂದು ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಸರ್ಕಾರಿ ಆಸ್ಪತ್ರೆಗೆ ಹೋಗಲು ನಗರ ಪೋಲೀಸ್ ಠಾಣೆ ಮುಂದೆ ಹೋಗಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಪೋಲೀಸ್ ಠಾಣೆಗೆ ಹೋಗಿ ನಂತರ ಆಸ್ಪತ್ರೆಗೆ ಹೋಗಿರುತ್ತೇವೆ ಎನ್ನುತ್ತಾರೆ. ಅದೇ ದಿನ ದೂರು ನೀಡಲು ಯಾವುದಕೇ ತೊಂದರೆ ಇತ್ತ ಎಂದರೆ ಸಾಕ್ಷಿ ಆ ದಿನ ದೂರು ಪಡೆಯಲಿಲ್ಲ ಎನ್ನುತ್ತಾರೆ. ಆ ದಿನ ಯೂವುದೇ ಗಲಾಟೆ ಆಗಿಲ್ಲದಿದ್ದರೂ ಗಲಾಟೆ ಆಗಿದೆ ಎಂದು 6 ದಿನದ ನಂತರ ಸುಳ್ಳು ದೂರನು ಚಾಸಾ–1 ರವರು ನೀಡಿರುತ್ತಾರೆ ಎಂದರೆ ಸರಿಯಲ್. ಮು ಮಾ –1 ನಮ್ಮ ಮನೆಯ ಬಳಿ ಬಿದ್ದಿತ್ತು. ಮು ಮಾ –1 ನ್ನು ಚಾಸಾ–1 ರವರೇ ಪೋಲೀಸರಿಗೆ ನೀಡಿರುತ್ತಾರೆ.

ಸದರಿ ಮು ಮಾ –1 ಚಾಸಾ–1 ರವರು ತೆಗೆದಿಟ್ಟಿದ್ದು ಪೋಲೀಸರಿಗೆ ನೀಡಿರುತ್ತಾರೆ. ಸದರಿ ಕಲ್ಲು ರಸ್ತೆಯಲ್ಲಿ ಬಿದ್ದಿರುತ್ತದೆ ಎಂದರೆ ಸಾಕ್ಷಿ ಪೋಲೀಸರಿಗೆ ಕೊಟ್ಟಿರುವುದು ನಿಜ ಎಂದು ಹೇಳುತ್ತಾರೆ. ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ಆರೋಪಿ ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದು ಹೇಳಿರುತ್ತೇನೆ. ಈ ಅಂಶ ಹೇಳಿಕೆಯಲ್ಲಿ ನಮೂದು ಇದೆಯಾ ಎಂದರೆ ಸಾಕ್ಷಿ ಪೋಲೀಸರು ಅದನ್ನು ನಮೂದಿಸಿಲ್ಲ ಎನ್ನುತ್ತಾರೆ. ಚಪ್ಪಲಿಯನ್ನು ಪೋಲೀಸರಿಗೆ ನೀಡಿದ್ದೀರ ಎಂದರೆ ಸಾಕ್ಷಿ ಆರೋಪಿ ಚಪ್ಪಲಿಯಿಂದಲೇ ಹೊಡೆದಿರುತ್ತಾರೆ ಎನ್ನುತ್ತಾರೆ. ಪೋಲೀಸರು ನಮ್ಮನ್ನು ಹೆದರಿಸಿ ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ಬರೆದುಕೊಡು ಎಂದು ತಿಳಿಸಿದರು. ಆರೋಪಿಯ ಮೇಲೀನ ದ್ವೇಷದಿಂದ ಈ ರೀತಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಹೇಳಿಕೆಯನ್ನು ಇದೇ ರೀತಿ ಬರೆಯುವಂತೆ ಹೇಳಿ ಬರೆಸಿಲ್ಲ. ನನ್ನ ಹೇಳಿಕೆಯುೀಲ್ಲಿ ಏನು ಬರೆದಿದೆ

ಎಂದು ಗೊತ್ತಿಲ್ಲ. ಯಾವುದೇ ಗಲಾಟೆ ನಡೆಯದಿದ್ದರೂ ಮಗುವಿನ ವಿಚಾರಕ್ಕಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**